OS No. 13/2022

DW-2

**(ಇಂದು ದಿಃ 23-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**<u>ಪಾಟೀ ಸವಾಲುಃ- ವಾದಿ ಪರ ಶ್ರೀ. ಎಸ್ ಕೆ ಡಿ ವಕೀಲರಿಂದಃ-</u>**

1ನೇ ಪ್ರತಿವಾದಿಯ ಮೊದಲ ಹೆಂಡತಿ 3ನೇ ವಾದಿ ಎಂದರೆ ಸರಿ. ಸಿದ್ದಪ್ಪ ಅವರಿಬ್ಬರ ಮಗ ಎಂದರೆ ನನಗೆ ಗೊತ್ತಿಲ್ಲ, ನ್ಯಾಯಾಲಯದ ಮುಂದೆ ಇರುವ 2ನೇ ವಾದಿ ಸಿದ್ದಪ್ಪನ ಹೆಂಡತಿ ಮತ್ತು 1ನೇ ವಾದಿ ಸಿದ್ದಪ್ಪನ ಮಗಳು ಎಂದರೆ ನನಗೆ ಗೊತ್ತಿಲ್ಲ, ದಾವಾ ಜಮೀನುಗಳು ತಿಪ್ಪಣ್ಣನಿಗೆ ಅವರ ತಾಯಿ ತಾಯಿಯಕಡೆಯಿಂದ ಬಂದಿದ್ದವು. ಆ ಬಗ್ಗೆ ನಾನು ದಾಖಲಾತಿ ನೋಡಿಲ್ಲ, ತಿಪ್ಪಣ್ಣನ ತಂದೆಯ ಕರೆಪ್ಪ ಎಂದರೆ ಸರಿ. ಕರೆಪ್ಪನ ತಂದೆಯ ಹೆಸರು ನನಗೆ ಗೊತ್ತಿಲ್ಲ, ಕರೆಪ್ಪಣ್ಣ ತಂದೆಯ ಹೆಸರು ತಿಪ್ಪಣ್ಣ ಎಂದರೆ ನನಗೆ ಗೊತ್ತಿಲ್ಲ, 1ನೇ ಪ್ರತಿವಾದಿ ಕರೆಪ್ಪನ ಸ್ವಂತ ಮಗ ಅಲ್ಲ ಆತ ಬೇರೆ ಮನೆಯಿಂದ ಬಂದಿದ್ದ, ದಾವಾ ಆಸ್ತಿಗಳ ಸಲುವಾಗಿ ಕರೆಪ್ಪ 1ನೇ ಪ್ರತಿವಾದಿಯನ್ನು ಮನೆಗೆ ಕರೆದುಕೊಂಡು ಬಂದಿದ್ದರು ಎಂದರೆ ಸರಿ. 2ನೇ ವಾದಿಯ ತಂದೆ ತಾಯಿಗೆ ದಾವಾ ಜಮೀನುಗಳ ಬಗ್ಗೆ ಮಾಹಿತಿ ನೀಡಿ ಅವು ಸಿದ್ದಪ್ಪನಿಗೆ ಬರಬೇಕಾದ ಜಮೀನುಗಳು ಎಂದು ಹೇಳಿದ ಸಲುವಾಗಿ 2ನೇ ವಾದಿಯನ್ನು ಸಿದ್ದಪ್ಪನಿಗೆ ಕೊಟ್ಟು ಮದುವೆಮಾಡಿದರು ಎಂದರೆ ನನಗೆ ಗೊತ್ತಿಲ್ಲ, ಕೊಲಕಂಬಾ, ಕೊಡ್ಲಾ ಗ್ರಾಮದ ಜಮೀನುಗಳು ಚೆನ್ನಾಗಿವೆ ಎಂದರೆ ಸರಿ. ಅಲ್ಲಿ ಒಳ್ಳೆಯ ಬೆಳೆ ಬರುತ್ತದೆ ಎಂದರೆ ಸರಿಯಲ್ಲ, ಅಲ್ಲಿ 1ಎಕರೆ ಜಮೀನಿಗೆ ಇಪ್ಪತ್ತು ಲಕ್ಷಕ್ಕಿಂತ ಹೆಚ್ಚು ಬೆಲೆ ಇದೆ ಎಂದರೆ ನನಗೆ ಗೊತ್ತಿಲ್ಲ, 1ನೇ ಪ್ರತಿವಾದಿ ಮಗಳ ಮದುವೆ ಇದ್ದ ಕಾರಣ 1ನೇ ಪ್ರತಿವಾದಿ ಜಮೀನು ಮಾರಾಟ ಮಾಡಿದ್ದಾರೆ. ಸಿದ್ದಪ್ಪ ಹೊರತು ಪಡಿಸಿ 1ನೇ ಪ್ರತಿವಾದಿಗೆ ಭೀಮವ್ವನ ಕಡೆಯಿಂದ ಬೇರೆ ಮಕ್ಕಳು ಇಲ್ಲ ಎಂದರೆ ಸರಿ. ಮಗಳ ಮದುವೆಗಾಗಿ 1ನೇ ಪ್ರತಿವಾದಿ ಮಾರಾಟ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನಾವು ಕಡಿಮೆ ಬೆಲೆಗೆ ಜಮೀನು ಕೊಂಡಿದ್ದೇವೆ ಎಂದರೆ ಸರಿಯಲ್ಲ, 1 ಎಕರೆ ಜಮೀನಿನಲ್ಲಿ ಸುಮಾರು 6 ಕುಂಟಲ್ ತೋಗರಿ ಫಸಲು ಬರುತ್ತದೆ ಎಂದರೆ ಸರಿಯಲ್ಲ, ಕಡಲೆ 7-8 ಕುಂಟಲ್ ಬೆಳೆಯ ಬಹುದು ಎಂದರೆ ಸರಿಯಲ್ಲ,

1ನೇ ಪ್ರತಿವಾದಿ, 3ನೇ ವಾದಿ ಮತ್ತು ಸಿದ್ದಪ್ಪರವರ ಪರಸ್ಪರ ಸಂಬಂಧದ ಬಗ್ಗೆ ಸುಳ್ಳು ಎಂದು ಯಾವ ಆಧಾರದ ಮೇಲೆ ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಬರೆಸಿದ್ದೇನೆ ಎಂದರೆ ಸಾಕ್ಷಿ ಸುಮ್ಮನೆ ನಿಂತಿರುತ್ತಾರೆ. 1ನೇ ಪ್ರತಿವಾದಿ ಮಾತು ಕೇಳಿಕೊಂಡು 3ನೇ ವಾದಿ

1ನೇ ಪ್ರತಿವಾದಿಯ ಹೆಂಡತಿ ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**